# ಪೆಂಟಗನ್‌ಗೆ ರಾಧಾ ಅಯ್ಯಂಗಾರ್



ಅಮೆರಿಕದ ಆಡಳಿತದಲ್ಲಿ ಭಾರತೀಯರ ಪಾಲ್ಗೊಳ್ಳುವಿಕೆ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಈ ಸಾಲಿಗೆ ಹೊಸ ಸೇರ್ಪಡೆ, ಪೆಂಟಗನ್‌ನಲ್ಲಿ ರಕ್ಷಣಾ ಇಲಾಖೆಯ ಅಧೀನ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ರಾಧಾ ಅಯ್ಯಂಗಾರ್ ಪ್ಲಂಬ್

■ ಪ್ರವೀಣ ಕುಲಕರ್ಣಿ

ಪೆಂಟಗನ್ ಅಂದರೆ ಗೊತ್ತಲ್ಲ? ಅಮೆರಿಕದ ರಕ್ಷಣಾ ಇಲಾಖೆಯ ಪ್ರಧಾನ ಕಚೇರಿ ಇದು. ಜಗತ್ತಿನ ಅತ್ಯಂತ ಶಕ್ತಿಶಾಲಿ ಸೈನ್ಯದ ಒಂದು ಪುಟ್ಟ ಚಲನೆಗೂ ಇಲ್ಲಿಂದಲೇ ಇಶಾರೆ ಹೋಗಬೇಕು. ಇಂತಹ ಕಚೇರಿಯಲ್ಲಿ ಪ್ರಮುಖ ಹುದ್ದೆ ಸಿಗುವುದು ಅಷ್ಟು ಸುಲಭವೇನಲ್ಲ. ಇಲ್ಲಿನ ಒಬ್ಬೊಬ್ಬ ಅಧಿಕಾರಿಯನ್ನೂ ಅಳೆದು ಸುರಿದು ಆಯ್ಕೆ ಮಾಡಲಾಗುತ್ತದೆ. ಇಂತಹ ಪೆಂಟಗನ್‌ನಲ್ಲಿ ರಕ್ಷಣಾ ಇಲಾಖೆಯ ಅಧೀನ ಕಾರ್ಯದರ್ಶಿ (ಸ್ವಾಧೀನ ಮತ್ತು ಸುಸ್ಥಿರತೆ) ಹುದ್ದೆಗೆ ಆಯ್ಕೆ ಆಗಿರುವುದು ಭಾರತೀಯ ಮೂಲದ ರಾಧಾ ಅಯ್ಯಂಗಾರ್ ಪ್ಲಂಬ್.

ರಾಧಾ ಅವರನ್ನು ಈ ಮಹತ್ವದ ಹುದ್ದೆಗೆ ನೇಮಕ ಮಾಡುವ ಮೂಲಕ ಅಮೆರಿಕದ ಅಧ್ಯಕ್ಷ ಜೋ ಬೈಡನ್ ತಮ್ಮ ಆಡಳಿತದಲ್ಲಿ ಭಾರತೀಯ ಮೂಲದ ವ್ಯಕ್ತಿಗಳಿಗೆ ಆದ್ಯತೆ ನೀಡುವ ಪರಂಪರೆಯನ್ನು ಮುಂದುವರಿಸಿದ್ದಾರೆ. ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಬೈಡನ್ ಅವರಿಗೆ ಭಾಷಣ ಬರೆದುಕೊಡುವ ವಿನಯ್ ರೆಡ್ಡಿ ಸೇರಿದಂತೆ ಭಾರತೀಯ ಮೂಲದ ಹಲವರು ಅಧ್ಯಕ್ಷರ ನೆರವಿಗೆ ಟೊಂಕಕಟ್ಟಿ ನಿಂತಿದ್ದಾರೆ. ಸದ್ಯ, ಅಧೀನ ಕಾರ್ಯದರ್ಶಿ ಅವರ ಕಚೇರಿಯಲ್ಲಿ ಮುಖ್ಯ ಅಧಿಕಾರಿಯಾಗಿ ಕೆಲಸ ಮಾಡುತ್ತಿರುವ ರಾಧಾ, ರಕ್ಷಣಾ ವಿಷಯಗಳ ತಜ್ಞೆಯಾಗಿ ಹೆಸರು ಮಾಡಿದವರು. ಅಮೆರಿಕದ ರಕ್ಷಣಾ ಇಲಾಖೆಯಲ್ಲಿ ಕೆಲಸಕ್ಕೆ ಸೇರುವ ಮುನ್ನ ಗೂಗಲ್‌ನಲ್ಲಿ ವಿಶ್ವಾಸಾರ್ಹತೆ ಮತ್ತು ಸುರಕ್ಷತೆ ಹೆಚ್ಚಿಸಲು ಅಗತ್ಯವಾದ ಒಳನೋಟ ಒದಗಿಸುವ ತಂಡದ ಮುಖ್ಯಸ್ಥರಾಗಿ ಅವರು ಕೆಲಸ ಮಾಡಿದ್ದರು.

ಗೂಗಲ್‌ನಲ್ಲಿ ಮಾತ್ರವಲ್ಲ, 'ಫೇಸ್‌ಬುಕ್' ಸಂಸ್ಥೆಯ ನೀತಿ ನಿರೂಪಣೆಯ ಮುಖ್ಯಸ್ಥೆಯಾಗಿಯೂ ಅವರು ಹೊಣೆ ನಿಭಾಯಿಸಿದ್ದರು. ಈ ಹುದ್ದೆಯಲ್ಲಿದ್ದಾಗ, ಅಂತರರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಸಂಕೀರ್ಣ ವಿಷಯಗಳಿಗೆ ಮುಖಾಮುಖಿಯಾದ ಅನುಭವ ಅವರಿಗಿದೆ. 'ರ್‍ಯಾಂಡ್' (Rand) ಕಂಪನಿಯಲ್ಲೂ ಸುರಕ್ಷತಾ ವಿಶ್ಲೇಷಕಿಯಾಗಿ ಕೆಲಸ ಮಾಡಿದ್ದರು. ಅಮೆರಿಕದ ರಕ್ಷಣಾ ಇಲಾಖೆ ಹಾಗೂ ಇಂಧನ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ ಅನುಭವ ಇರುವ ರಾಧಾ ಅವರು, ವೈಟ್ ಹೌಸ್‌ನ 'ರಾಷ್ಟ್ರೀಯ ರಕ್ಷಣಾ ಕೌನ್ಸಿಲ್'ನ ಸದಸ್ಯೆಯಾಗಿದ್ದರು. ಈ ಅನುಭವಗಳಿಗೆಲ್ಲ ಕಲಶಪ್ರಾಯವಾಗಿ ಇದೀಗ ರಕ್ಷಣಾ ಇಲಾಖೆಯ ಅಧೀನ ಕಾರ್ಯದರ್ಶಿಯಾಗಿ ಪೆಂಟಗನ್‌ನಲ್ಲಿ ಕಾರ್ಯ ನಿರ್ವಹಿಸುವ ಅವಕಾಶ ಅವರಿಗೆ ದೊರೆತಿದೆ.

ಹೆಸರೇ ಸೂಚಿಸುವಂತೆ ರಾಧಾ ಅವರು ಭಾರತದ ತಮಿಳುನಾಡಿನ ಮೂಲದವರು. ಹಾರ್ವರ್ಡ್‌ನಿಂದ ಪಿಎಚ್.ಡಿ. ಪದವಿ ಪಡೆದವರು. ಲಂಡನ್ನಿನ 'ಸ್ಕೂಲ್ ಆಫ್ ಎಕನಾಮಿಕ್ಸ್' ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿಯೂ ಅವರು ಕೆಲಕಾಲ ಸೇವೆ ಸಲ್ಲಿಸಿದ್ದರು. ಬೋಧನೆಯ ಮೂಲಕ ವಿದ್ಯಾರ್ಥಿಗಳ ಅರಿವಿನ ಶಕ್ತಿಗೆ ಸಾಣೆ ಹಿಡಿಯುವ ಕೆಲಸ ಮಾಡಿದ ಅವರೀಗ, ದೇಶದ ರಕ್ಷಣಾನೀತಿಗೆ ಸಂಬಂಧಿಸಿದಂತೆ ತಮ್ಮ ಅನುಭವವನ್ನು ಒರೆಗೆ ಹಚ್ಚಲಿದ್ದಾರೆ.

ರಕ್ಷಣಾ ವಿಷಯದಲ್ಲಿ, ಅದರಲ್ಲೂ ಮಾಹಿತಿ ತಂತ್ರಜ್ಞಾನದಂತಹ ಶಾಖೆಯ ಭದ್ರತೆಯ ವಿಷಯದಲ್ಲಿ, ರಾಧಾ ಅವರು ಮಾಸ್ಟರ್ಸ್ ಎನ್ನುವಂತಹ ಪರಿಣತಿ ಹೊಂದಿದ್ದಾರೆ. ಈ ಕಾರಣಕ್ಕಾಗಿ ಭದ್ರತೆಗೆ ಸಂಬಂಧಿಸಿದ ಚರ್ಚೆ ಬಂದಾಗಲೆಲ್ಲ ರಾಧಾ ಅವರ ಹೆಸರೂ ಪ್ರಸ್ತಾಪಗೊಳ್ಳುತ್ತಲೇ ಇರುತ್ತದೆ. ತಾವು ಕೆಲಸ ಮಾಡಿದ ಎಲ್ಲ ಕಡೆಗಳಲ್ಲಿ ಅತ್ಯುತ್ತಮ ವಿಶ್ಲೇಷಕಿ ಎಂದು ಹೆಸರು ಮಾಡಿರುವುದು ಅವರ ಹೆಗ್ಗಳಿಕೆ.

ನ್ಯೂಯಾರ್ಕ್ ನಗರದಲ್ಲಿ ನೆಲೆ ಕಂಡುಕೊಂಡಿರುವ ರಾಧಾ, ತಮ್ಮ ನೆಲಮೂಲದ ಕುರಿತು ಎಲ್ಲಿಯೂ ಹೆಚ್ಚಿನ ವಿವರ ಹಂಚಿಕೊಂಡಿಲ್ಲ. ಅವರ ಹೆಸರಿನ ಗೂಗಲ್ ಮಾಡಿದರೆ ಅವರ ವೈಯಕ್ತಿಕ ವಿವರಗಳಿಗಿಂತ ಮಾಡಿದ ಕೆಲಸ, ನಿಭಾಯಿಸಿದ ಹುದ್ದೆಗಳ ವಿವರವೇ ಸುರುಳಿ ಸುರುಳಿಯಾಗಿ ಬಿಚ್ಚಿಕೊಳ್ಳುತ್ತದೆ. ಆಡದೆ ಮಾಡುವವನು ರೂಢಿಯೊಳಗುತ್ತಮನು ಎಂಬ ಸರ್ವಜ್ಞನ ವಾಣಿಗೆ ಅನ್ವರ್ಥವಾಗಿದೆ ಅವರ ಬದುಕು.

ಅಮೆರಿಕದ ಆಡಳಿತದಲ್ಲಿ ಭಾರತೀಯರ ಕಾರುಬಾರು ಅಧಿಕವಾಗಿದೆ. ಭಾರತ ಮೂಲದ 55 ಜನ ಬೈಡನ್ ಸರ್ಕಾರದ ಪ್ರಮುಖ ಹುದ್ದೆಗಳಲ್ಲಿ ಇದ್ದಾರೆ. ಇವರೆಲ್ಲ ಅಲ್ಲಿನ ಸರ್ಕಾರದ ಚಾಲನಶಕ್ತಿ ಎನ್ನುವುದರಲ್ಲಿ ಎರಡು ಮಾತಿಲ್ಲ. ರಾಧಾ ಅವರು ಈ ತಂಡಕ್ಕೆ ಹೊಸ ಸೇರ್ಪಡೆ ಅಷ್ಟೇ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65